ತರಬೇತಿಗೊಳಿಸಿರಬೇಕು. ನಾನು ಆ ಕಲೆ ಸಿದ್ಧಿಸಿಕೊಂಡಿದ್ದೇನೆ. ಜೊತೆಗೆ ಇಮೇಜ್ ಎರರ್ ಲೆವೆಲ್ ಅನಾಲಿಸಿಸ್ ಎಂಬ ತಂತ್ರಾಂಶ ಬಳಸಿ ಫೋಟೊವನ್ನು ಪರೀಕ್ಷಿಸಿದಾಗ, ಅದು ಖಚಿತವಾಯಿತು. ಅಂದ್ರೆ ಫೋಟೊದಲ್ಲಿರುವ ಮುದುಕನ ಹಿಂದಿರೋ ಹಿನ್ನೆಲೆ ಕೃತಕ. ಯಾವುದೋ ಹಿನ್ನೆಲೆಯ ಮೇಲೆ ಮುದುಕನ ಚಿತ್ರವನ್ನು ಸೇರಿಸಲಾಗಿದೆ, ಅಷ್ಟೆ!"

"ಯಾಕೆ ಫೋಟೋಶಾಪ್ ಮಾಡಿದ್ದಾರೆ?"

"ನೀನು ಹಿನ್ನೆಲೆಯನ್ನು ಸೂಕ್ಷ್ಮವಾಗಿ ಗಮನಿಸಿಲ್ಲ. ಇಗೋ ನೋಡಿಲ್ಲಿ... ಮಸುಕಾದ ಹೆಸರು... ಹೈದರಾಬಾದ್‌ನ ಹೋಟೆಲೊಂದರ ನಾಮಫಲಕ! ರಚನ್‌ನ ಫೋನು ಕೊನೆಗೆ ಪತ್ತೆಯಾಗಿದ್ದು ಅದೇ ಜಾಗದಲ್ಲಿ!! ಇದು ಕಾಕತಾಳೀಯವೇ? ಯಾರೋ ಆತನಿಗೆ ಹೈದರಾಬಾದಿಗೆ ಬರಲಿಕ್ಕೆ ಸೂಚನೆ ಕೊಟ್ಟಿದ್ದಾರೆ!! ಅದರಲ್ಲಿ ನಮೂದಾದ ದಿನಾಂಕ ಗಮನಿಸಿದೆಯಾ? ಅದು ಆತ ನಾಪತ್ತೆಯಾದ ದಿವಸದ್ದು! ಆ ಫೋಟೊವನ್ನು ಎರಡು ದಿನಗಳ ಹಿಂದೆಯೇ ಕೊಟ್ಟಿದ್ದಾರೆ... ಅಂದ್ರೆ ಆ ದಿವಸ ಆತ ಹೈದರಾಬಾದಿನಲ್ಲಿರಬೇಕೆಂದು ಸೂಚನೆ!! ನನ್ಗೆ ಅಲ್ಲಿ ಸಿಕ್ಕಿದ ಇನ್ನೊಂದು ಫೋಟೊದ ಹಿನ್ನೆಲೆಯಲ್ಲಿ ಶಿವಮೊಗ್ಗದ ಹೋಟೆಲೊಂದರ ಹೆಸರು ಮತ್ತು ದಿನಾಂಕವಿದೆ. ಅವ್ನ ಚರವಾಣಿಯ ದಾಖಲೆ ಪರಿಶೀಲಿಸಿದ್ರೆ, ಖಂಡಿತಾ ಆ ದಿನ ಅದು ಶಿವಮೊಗ್ಗೆಯಲ್ಲಿದ್ದಿರುತ್ತೆ ಅಂತ ಹೇಳಬಹುದು. ನಾವೀಗ ಕೂರ್ಗ್ ಟ್ರಾವೆಲ್ಸಿಗೆ ಹೋಗೋಣ. ರಚನ್ ಹೈದರಾಬಾದಿಗೆ ಹೇಗೆ ಹೋದ ಅಂತ ತಿಳಿದುಕೊಳ್ಳಲು."

"ಕೂರ್ಗ್ ಟ್ರಾವೆಲ್ಸೇ? ಯಾಕೆ?"

"ಡಿಸೋಜ ಕೊಟ್ಟಿದ್ದ ರಚನ್‌ನ ಚರವಾಣಿಯ ಕಳೆದ ಆರು ತಿಂಗಳಿನ ಕರೆವಿವರಗಳು! ಆತ ಆ ಏಜೆನ್ಸಿಗೆ ಕೆಲ ಬಾರಿ ಕರೆ ಮಾಡಿದ್ದಾನೆ. ಬೇಗ ಬಾ..."

ಕೂರ್ಗ್ ಟ್ರಾವೆಲ್ಸಿನವನು ನೀಡಿದ ಮಾಹಿತಿ ಪೂರ್ಣ ಸಹಕಾರಿಯಾಗಿರಲಿಲ್ಲ. ರಚನ್ ಕಾರು ಬಾಡಿಗೆಗೆ ತೆಗೆದುಕೊಂಡು ಹೋಗಿದ್ದು ಕರ್ನೂಲ್‌ಗೆ! ಅಲ್ಲಿಂದ ಅವನು ಪ್ರಾಯಶಃ ಬೇರೆ ಟ್ಯಾಕ್ಸಿ ಹಿಡಿದಿರಬೇಕು!! ಮುಂಚಿತವಾಗಿಯೇ ಯೋಚಿಸಿಯೇ ಮಾಡಿದ ಯೋಜನೆ!!!

"ಈಗ ಆ ಬಾಡಿಗೆ ಕಾರಿನ ಚಾಲಕನಿಂದ ನಮ್ಗೇನೂ ಉಪಯೋಗ ಆಗೋಲ್ಲ. ಓಕೆ, ನಾವೀಗ ಚರವಾಣಿಯ ವಿಭಾಗೀಯ ಕಚೇರಿಗೆ ಹೋಗೋಣ. ಹಾಂ, ಅದಕ್ಕೂ ಮುನ್ನ, ಗ್ರೇಟ್ ಆರ್ಟ್ ಟೈಲರ್! ಅವನ್ನ ಮಾತಾಡಿಸಬೇಕು. ಜೈನ್ ರಸ್ತೆಗೆ ಗಾಡಿ ತಿರುಗಿಸು."

ಸೋಜಿಗದಿಂದ ನಾನು ಕಾರನ್ನು ಹೊರಳಿಸಿದೆ. ಅಲ್ಲಿ ನಮ್ಗೆ ಅದೃಷ್ಟ ಸ್ವಲ್ಪ ಸಹಾಯ ಮಾಡ್ತು. ಗ್ರೇಟ್ ಆರ್ಟ್ ಟೈಲರ್ಸ್ ರಚನ್‌ನ ಕೋಟು ಹೊಲಿದವರು! ಕರಮಚಂದ 'ಸಿದ್ಧಿ ಪ್ಲಾಸ್ಟಿಕ್ಸ್' ಅನ್ನುವ ಹ್ಯಾಂಗರ್ ಬಗ್ಗೆ ಟೈಲರನಲ್ಲಿ ವಿಚಾರಿಸಿದ. ರಚನ್‌ನ ಮನೆಯಲ್ಲಿ ಕಂಡಿದ್ದ ಕೋಟಿನ ಹ್ಯಾಂಗರ್ ಅದೇ ಬ್ರಾಂಡ್‌ನದ್ದು. ಟೈಲರ್ ಆ ಬ್ರಾಂಡಿನ ಹ್ಯಾಂಗರ್ ಕೇವಲ ಮೂರು ತಿಂಗಳಷ್ಟೇ ಬಳಸಿದ್ದ, ಸುಮಾರು ಒಂದೂವರೆ ವರ್ಷದ ಹಿಂದೆ. ಆಮೇಲೆ ಅದು ದುಬಾರಿ ಅಂತ ಅದನ್ನ ನಿಲ್ಲಿಸಿದ್ದ. ಹಾಗಾಗಿ ಆ ಸಮಯದಲ್ಲಿ ಹೊಲಿಸಿದ ಉಡುಪುಗಳ ಅಳತೆ ತೆಗೆದುಕೊಂಡ ಕಡತಗಳನ್ನು ಜಾಲಾಡುವುದು ಸುಲಭವಾಯಿತು. ಸುಮಾರು ಒಂದು ವರ್ಷಕ್ಕೂ ಹಿಂದೆ ರಚನ್ ಕೋಟು ಹೊಲಿಸಿದ್ದ ಅನ್ನೋದು ಪತ್ತೆಯಾಯಿತು! ಅದಾಗಿ ಸುಮಾರು ಒಂದು ತಿಂಗಳಲ್ಲಿ ರಚನ್ ಮೊದಲ ಬಾರಿಗೆ ನಾಪತ್ತೆಯಾಗಿದ್ದ.

"ಕೋಟಿಗೂ, ರಚನ್ ನಾಪತ್ತೆಯಾಗಿದ್ದಕ್ಕೂ ಸಂಬಂಧವಿದೆ! ಇರಲಿ, ನಾವೀಗ ಏರ್ ಟೆಲ್ ಕಚೇರಿಗೆ ಹೋಗೋಣ."